# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 482
2. ಸದಸ್ಯರ ಹೆಸರು : ಶ್ರೀ ಪಿ.ಹೆಚ್.ಪೂಜಾರ್
3. ಉತ್ತರಿಸಬೇಕಾದ ದಿನಾಂಕ :11.12.2025.
4. ಉತ್ತರಿಸುವ ಸಚಿವರು : ಮಾನ್ಯ ಸಣ್ಣ ನೀರಾವರಿ, ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು.

| ಕ್ರ ಸ | ಪ್ರಶ್ನೆ | ಉತ್ತರ |
|---|---|---|
| ಅ. | ಬಾಗಲಕೋಟೆ ಜಿಲ್ಲೆಯ ಗುಳೇದಗುಡ್ಡ ತಾಲೂಕು ವ್ಯಾಪ್ತಿಯ ಹಳ್ಳಿಗಳ ಜಮೀನುಗಳಿಗೆ ನೀರಾವರಿ ಸೌಲಭ್ಯ ದೊರಕಲೆಂಬ ಉದ್ದೇಶದಿಂದ 2010 ರಲ್ಲಿ ಜಾರಿಯಾದ ಇಂಜಿನವಾರಿ ಏತನೀರಾವರಿ ಯೋಜನೆಯು ಕಳೆದ 6-7 ವರ್ಷದಿಂದ ನೀರೆತ್ತುವ ಅವಶ್ಯಕ ಮೋಟರುಗಳು ಕೆಟ್ಟು ಹೋದ ಕಾರಣ ಮತ್ತು ಕಾಲುವೆಗಳಲ್ಲಿ ನಿರ್ವಹಣೆ ಇಲ್ಲದೇ ಹೂಳು ತುಂಬಿ ಗಿಡಗಂಟಿ ಬೆಳೆದು ಸಮರ್ಪಕ ಕಾರ್ಯ ಯೋಜನೆ ಇಲ್ಲದೇ ರೈತರು ಜಮೀನುಗಳಿಗೆ ನೀರು ದೊರೆಯದೇ ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದಿಯೇ: | ಬಾಗಲಕೋಟೆ ಜಿಲ್ಲೆಯ ಗುಳೇದಗುಡ್ಡ ತಾಲ್ಲೂಕಿನ ಇಂಜಿನವಾರಿ ಏತ ನೀರಾವರಿ ಯೋಜನೆಯ ಪಂಪ್‌ಸೆಟ್ ಗಳು ದುರಸ್ತಿಯಲ್ಲಿರುವುದರಿಂದ, ವಿದ್ಯುತ್ ಪರಿವರ್ತಕ ದುರಸ್ತಿಯಿರುವುದರಿಂದ ಹಾಗೂ ಕಾಲುವೆಗಳಲ್ಲಿ ಹೂಳು ತುಂಬಿರುವುದರಿಂದ ಯೋಜನೆಯು ತಾತ್ಕಾಲಿಕವಾಗಿ ಸ್ಥಗಿತಗೊಂಡಿರುತ್ತದೆ. |
| ಆ. | ಬಂದಿದ್ದಲ್ಲಿ ಪ್ರಸ್ತುತ ವರ್ಷ ಈ ಕುರಿತು ಕ್ರಿಯಾ ಯೋಜನೆ ಹಾಕಿಕೊಂಡು ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗುವುದೇ? (ಮಾಹಿತಿ ಒದಗಿಸುವುದು) | ಪ್ರಸಕ್ತ ಸಾಲಿನಲ್ಲಿ, ಸದರಿ ಯೋಜನೆಯ ದುರಸ್ತಿಗಾಗಿ 4702 ಪ್ರಧಾನ ಕಾಮಗಾರಿಗಳು, ಏತ ನೀರಾವರಿ ಯೋಜನೆ ಲೆಕ್ಕಶೀರ್ಷಿಕೆ ಅಡಿ ರೂ.20.00 ಲಕ್ಷ ಅನುದಾನದ ಒದಗಿಸಲಾಗಿದ್ದು, ದುರಸ್ತಿ ಕಾಮಗಾರಿಯನ್ನು ಕೈಗೊಳ್ಳಲಾಗುವುದು. |

**MID 112 LCQ 2025**

**(ಎನ್.ಎಸ್. ಬೋಸರಾಜು)**
ಸಣ್ಣ ನೀರಾವರಿ, ಹಾಗೂ ವಿಜ್ಞಾನ
ಮತ್ತು ತಂತ್ರಜ್ಞಾನ ಸಚಿವರು.